ಗದ್ಯ—ಸುಮತಿ ಮದನಕುಮಾರನ ಚರಿತ್ರೆ (ಸ್ಯಾಂಡಿಫರ್ಡ್ ಅಂಡ್ ಮರ್ಟರ್ ಎಂಬ ಗ್ರಂಥದ ಭಾಷಾಂತರ) ಮೆಸ್ಸರ್ ಎಂ. ಎಸ್. ಪುಟ್ಟಣ್ಣ ಬಿ. ಎ. ಯವರಿಂದ ಮಾಡಲ್ಪಟ್ಟದ್ದು. ಪುಟಗಳು 1—100.

ಪದ್ಯಸಾರದಲ್ಲಿನ ಪದ್ಯಗಳು ವಿನಹ ಮೇಲೆ ನಿಯಮಿಸಲ್ಪಟ್ಟಿರುವ ಗ್ರಂಥಗಳೆಲ್ಲಾ ಇಲಾಖೆಯವರಿಂದ ಬಂಧೇ ಪುಸ್ತಕವಾಗಿ ಛಾಪಿಸಲ್ಪಡುತ್ತವೆ.

ತೆಲುಗು—(1) ನಳಚರಿತ್ರಮು
(2) ವೇಣೀಸಂಹಾರ ಮತ್ತು ಮಾಳವಿಕಾಗ್ನಿ ಮಿತ್ರನಾಟಕಗಳ ಕಥೆ (ಮದ್ರಾಸ್ ಸ್ಕೂಲ್ ಬುಕ್ಸು ಮತ್ತು ವರ್ನಾಕ್ಯುಲರ್ ಲಿಟ್ರೆಚರ್ ಸೊಸೈಟಿಯವರಿಂದ ಛಾಪಿಸಲ್ಪಟ್ಟದ್ದು)
(3) ಕಂಠಪಾಠ—ನಳಚರಿತ್ರಮು, ಪುಟಗಳು 16—30.

ಅರಬ (1) ಪಂಚತಂತ್ರಂ—ಪ್ರಸ್ತಾವನೆ ಮತ್ತು ಮೊದಲನೇ ಭಾಗ.
(2) ಎರಡನೇ ಸಂಬರ್ ನೀತಿಮಂಜರಿ.
(3) ಕಂಠಪಾಠ—ಎರಡನೇ ನಂಬರ್ ನೀತಿಮಂಜರಿ, ಪದ್ಯಗಳು 65—128.

ಹಿಂದುಸ್ತಾನಿ (1) ಮುಬಾದಿ-ಉಲ್—ಇರ್ಫಾ, ನಾಲ್ಕನೇ ಭಾಗ (ಜಷ್ಮಿ ಫೈಯಿಜ್ ಮುದ್ರಾಕ್ಷರಶಾಲೆ, ಡೆಲ್ಲಿ) ಪುಟಗಳು ಸುಮಾರು 100.
(2) ಮುಜ್‌ಮೂವಾ—ಇ-ಸೊರ್ಖ ಎರಡನೇ ಭಾಗದ ಮೊದಲಿನಿಂದ ಅರ್ಧಭಾಗ.

ಸಂಸ್ಕೃತ ಆವಶ್ಯಕ ಭಾಷೆ.
(1) ಚಂಪೂರಾಮಾಯಣ, ಬಂದನೇ ಮತ್ತು ಎರಡನೇ ಕಾಂಡಗಳು (ಮಹಾರಾಣಿಯವರ ಸ್ಕೂಲ್ ಛಾಪ)
(2) ಕುಮಾರ ಸಂಭವ ಆರು ಮತ್ತು ಏಳನೇ ಸರ್ಗಗಳು.

ಸಂಸ್ಕೃತ ಐಚ್ಛಿಕ ಭಾಷೆ.
ವಿಕ್ರಮಾರ್ಕ ಚರಿತ್ರಂ ಮೊದಲನೇ ಎಂಟುಕಥೆಗಳು ಪ್ರಸ್ತಾವನೆ ವಿನಹ.

ಫಾರಸಿ ಆವಶ್ಯಕ ಭಾಷೆ.
(1) ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ)
(2) ಸರ್ವಾಯಿಖಿರಾದ್ (ಪಂಜಾಬ್ ಛಾಪ) ಪುಟಗಳು 1—112.

ಫಾರಸಿ ಐಚ್ಛಿಕ ಭಾಷೆ.
(1) ಎರಡನೇ ಫಾರಸಿ ಪುಸ್ತಕ (ಪಂಜಾಬ್ ಛಾಪ)
(2) ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ) ಪುಟಗಳು 1—48.

ಲ್ಯಾಟಿನ್ ಐಚ್ಛಿಕ ಭಾಷೆ.
ಸಿಸರ್ ಡಿಬೆಲೊಗ್ಯಾಲಿಕೊ—ಎರಡನೇ ಪುಸ್ತಕ.

ಹೆಚ್. ಜೆ. ಛಾಛಾ,
ಎಡ್ಯೂಕೇಷನ್ ಸೆಕ್ರೆಟರಿ.

ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಬಳೆಪೇಟೆಯಲ್ಲಿರುವ ಚಿಕ್ಕಣ್ಣನ ವಿಷಯದಲ್ಲಿ—

ಸ್ಯ 1894—95ನೇ ಇಸವಿ ದಿವಾಳಿ ಕೇಸ್ ನಂಬರ್ 130.

ಹುಕುಂ,

ನೋಲ್ಕಂಡ ಚಿಕ್ಕಣ್ಣನು, ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ಈ ಕೋರ್ಟು ರೂಬರೂ ಅರ್ಜಿದಾರನನ್ನೂ ಮತ್ತು ಸದರೀಯವನ ಲೇಣೇದಾರ್‌ರಾದ 6ನೇ ಬೆಂಗಳೂರು ಪೆಟ್ಟಯ್ಯನಪೇಟೆಯಲ್ಲಿರುವ ದೇವಾಂಗದ ಹೊನ್ನಪ್ಪನ ಯದುರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು, ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಬೆಂಗಳೂರು ಜೋರಿಪೇಟೇಲಿರುವ ದೇವಾಂಗದ ಬಳ್ಳಾಪುರದ ವೆಂಕಟರಮಣಪ್ಪ, 2ನೇ ಬೆಂಗಳೂರು ನಗರ್ತರಪೇಟೇಲಿರುವ ಆಣ್ಣಂಡಿ ಮರಿಯಪ್ಪ, 3ನೇ ಬೆಂಗಳೂರು ದೊಡ್ಡಪೇಟೆಲಿರುವ ನೂಲಿನ ಅಂಗಡಿ ಈಶ್ವರಪ್ಪ, 4ನೇ ಬೆಂಗಳೂರು ತಾರಾಮಂಡ್ಲಪೇಟೇಲಿರುವ ಚಾರುಮಯ್ಯನವರ ನಂಜುಂಡಪ್ಪ, 5ನೇ ಬೆಂಗಳೂರು ಲಿಂಗಕಟ್ಟಪೇಟೇಲಿರುವ ದೇವಾಂಗದ ಲಿಂಗಣ್ಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಚಿಕ್ಕಣ್ಣನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ತನ್ನ ಸಾಲಗಾರ್ರಿಗೆ ಪಾವತಿಬಗ್ಗೆ ಮಾಹೆಯಾನಾ ತಪ್ಪದೆ ಕೋರ್ಟಿಗೆ (2) ರೂಪಾಯಿ ಹಾಜರ್ಮಾಡುವ ಷರತ್ತಿನಮೇಲೆ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿನೋಚನೆ ಮಾಡಿರುವವಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೂ ಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿರಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1894ನೇ ಇಸವಿ ಡಿಸೆಂಬರ್ 22ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ,

ನಂಬರ್.	ಲೇಣೆದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ಹುಟ್ಟಿದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	6ನೇ ಬೆಂಗಳೂರು ಬೆಟ್ಟಯ್ಯನ ಪೇಟೇಲಿರುವ ದೇವಾಂಗದ ಹೊನ್ನಪ್ಪ ..	52–8–0	..	ಬೆಂಗಳೂರು ಸಬ್‌ಜಡ್ಜಿಯವರ ಕೋರ್ಟ್ 1892ನೇ ಇಸವಿ ಸ್ಮಾಲ್‌ಕಾಜ್ 1005ನೇ ನಂಬರ್ ಡಿಕರಿ ಮೊಬಲಗು–ಈ ಡಿಕರಿಯು ಈ ಲೇಣೆದಾರ್ ಹೊನ್ನಪ್ಪನು ಈ ದಿವಾಳಿದಾರ್ ಚಿಕ್ಕಣ್ಣನಮೇಲೂ ಮತ್ತು ಇದ ನಂದಿದುರ್ಗ ಡಿವಿಜ್ಞ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟ್ 1894–95ನೇ ಇಸವಿ ಮಿಸ್ 116ನೇ ನಂಬರ್ ದಿವಾಳಿದಾರ್ ಚಾಂಡಪ್ಪನ ಮೇಲೂ ಸಹ ಪಡದ್ದಾಗಿ ಇರುತ್ತೆ.	

ಸ್ಯ 1895ನೇ ಇಸವಿ ಜನವರಿ 24ನೇ ತಾರೀಖಿನಲ್ಲಿ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿದೆ.

ನಂಬರ್.	ಲೇಣೇದಾರ್ರ ಹೆಸರು.	ಮೊಬಲಗು.	ಷರಾ.
1	ವೆಂಕಟರಮಣಪ್ಪ ..	60—0—0	ಪತ್ರದ ಬಾಕಿ
2	ಮರಿಯಪ್ಪ ..	60—0—0	ಡಿಕರಿ ಮೊಬಲಗು
3	ಈಶ್ವರಪ್ಪ ..	35—0—0	ತಂಸೂಕು ಬಗೆ
4	ನಂಜುಂಡಪ್ಪ ..	60—0—0	ಡಿಕರಿ ಮೊಬಲಗು
5	ರಂಗಣ್ಣ ..	50—0—0	ತಂಸೂಕು ಬಗೆ
6	ಹೊನ್ನಪ್ಪ ..	52—8—0	ಡಿಕರಿ ಮೊಬಲಗು

ಟಿ. ನರಹರರಾವ್,
ಡಿಸ್ಟ್ರಿಕ್ಟು ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಮಾರ್ಚಿ 1895ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾರ್‌ಗಳ ಆಫಿಸ್‌ಗಳಲ್ಲಿ ಜೇವಾರಸಾಗಿರುವ ದಸ್ತಾವೇಜುಗಳನ್ನು ಹಾಜರು ಮಾಡಿದವರುಗಲಿ ಅಥವಾ ಅವರಿಂದ ಕ್ರಮವಾದ ಅಧಿಕಾರ ಪಡದುಕೊಂಡ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ಆಯಾ ಸಬ್ ರಿಜಿಸ್ಟ್ರಾರ್ ಮುಂದೆ ಹಾಜರಾಗಿ ವಾಪಸು ತೆಗದುಕೆಂಡು ಹೋಗಬಹುದು. ಇಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅವುಗಳನ್ನು ನಾಶಪಡಿಸಲಾಧೀತು.